ಶ್ರೀ ಕೆ. ಎಶ್ವೇಶ್ವರ ಹೆಗಡೆ: ಅನೇಕ ನಗರಸಭೆ, ಪುರಸಭೆಗಳವರು ಇದನ್ನು ವಿರೋಧ ಮಾಡಿ ಠರಾವು ಮಾಡಿದ್ದಾರೆ.

ಶ್ರೀ ಎ.ರಾಮದಾಸ್: ಮೈಸೂರು ಮಹಾನಗರಪಾಲಿಕೆಯವರೂ ಇದನ್ನು ವಿರೋಧ ಮಾಡಿದ್ದಾರೆ.

ಶ್ರೀ ಡಿ.ವಿ. ಸದಾನಂದಗೌಡ: ತಮ್ಮ ಪಕ್ಷದ ಪ್ರಮುಖರೇ, ಇದು ಸರಿಯಲ್ಲ, ಇದನ್ನು ಅನುಷ್ಠಾನ ಮಾಡಬಾರದು ಎಂದು ಮಂಗಳೂರಿನಲ್ಲಿ ಹೇಳಿರುವುದನ್ನು ತಾವೂ ಕೂಡ ಒಪ್ಪಿಕೊಂಡಿದ್ದೀರಿ. ಇದರ ಬಗ್ಗೆ ಏನು ಮಾಡುತ್ತೀರಿ?

ಶ್ರೀ ಡಿ.ಕೆ. ಶಿವಕುಮಾರ್: ಅವರು ಸಾವಿರ ಹೇಳುತ್ತಾರೆ. ಮೇಯರ್ ಅವರು ಹೇಳುತ್ತಾರೆ ಅದಕ್ಕೆ ಆ ತೀರ್ಮಾನಕ್ಕೆ ನಾವು ಬದ್ಧರಾಗಿದ್ದೇವೆ.

ಶ್ರೀ ಡಿ.ವಿ. ಸದಾನಂದಗೌಡ: ಅನುಷ್ಠಾನ ಮಾಡುವುದನ್ನು ಈಗ ತಡೆಹಿಡಿಯುವುದಿಲ್ಲವೇ? ಮಂಗಳೂರಿನಲ್ಲಿ ಕೂಡ ಇದು ಅನುಷ್ಠಾನವಾಗಿದೆಯೇ?

ಶ್ರೀ ಡಿ.ಕೆ. ಶಿವಕುಮಾರ್: ಇದು ಎಲ್ಲಾ ಕಡೆಗಳಲ್ಲಿ ಕಾರ್ಯರೂಪಕ್ಕೆ ಬಂದಿದೆ.

ಅಧ್ಯಕ್ಷರು: ಈಗಾಗಲೇ ಪ್ರಶ್ನೋತ್ತರ ವೇಳೆಗಿಂತ ಹತ್ತು ನಿಮಿಷ ಹೆಚ್ಚಾಗಿದೆ. ಆದ್ದರಿಂದ, ಉಳಿದಿರುವಂಥ ಮುಂದಿನ ಮೂರು ಪ್ರಶ್ನೆಗಳನ್ನು ಈ ಅಧಿವೇಶನದಲ್ಲೇ ಎಷ್ಟು ಸಾಧ್ಯವೋ ಅಷ್ಟು ಈಗ ತೆಗೆದುಕೊಳ್ಳುತ್ತೇವೆ. ಅವು ಲ್ಯಾಪ್ಸ್ ಆಗುವುದಿಲ್ಲ. ಇಲ್ಲಿದೆ ಪ್ರಶ್ನೋತ್ತರ ವೇಳೆ ಮುಗಿಯಿತು. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಆ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಇಲಾಖಾ ಸಚಿವರು): ಮಾನ್ಯ ಅಧ್ಯಕ್ಷರೆ, ದಿ: 9-7-02 ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳ ಒಂದನೇ ಪಟ್ಟಿಯಲ್ಲಿರುವ 41 ಪ್ರಶ್ನೆಗಳ ಪೈಕಿ 33 ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡುವ ಉತ್ತರವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಕಾರ್ಯದರ್ಶಿಯವರ ವರದಿ

ಶ್ರೀ ಟಿ. ರಾಜಣ್ಣ (ಕಾರ್ಯದರ್ಶಿ): ಕರ್ನಾಟಕ ವಿಧಾನಸಭೆ ಸನ್ಮಾನ್ಯ ಸಭಾಧ್ಯಕ್ಷರೆ, ಅಧಿವೇಶನದಲ್ಲಿ ಒಪ್ಪಿಸಿದ ವರದಿಯ ನಂತರ ರಾಜ್ಯಪಾಲರಿಂದ ಸಂದರ್ಭಾನುಸಾರವಾಗಿ ಒಪ್ಪಿಗೆಯನ್ನು ಪಡೆದಿರತಕ್ಕಂಥ ಈ ಕೆಳಕಂಡ ವಿಧೇಯಕಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅನುಬಂಧ - I

ಕ್ರಮ ಸಂಖ್ಯೆ	ವಿಧೇಯಕ ಹೆಸರು	ಒಪ್ಪಿಗೆಯನ್ನು ಪಡೆದ ದಿನಾಂಕ	ಒಪ್ಪಿಗೆಯನ್ನು ನೀಡಿದವರು
1	2	3	4
1.	ಕರ್ನಾಟಕ ಧನವಿನಿಯೋಗ (ಸಂಖ್ಯೆ 2) ವಿಧೇಯಕ, 2001	31-07-2001	ರಾಜ್ಯಪಾಲರು
2.	ಕರ್ನಾಟಕ ಮೋಟಾರು ವಾಹನಗಳ ತೆರಿಗೆ ವಿಧೇಯಕ, 2002	30-03-2002	ರಾಜ್ಯಪಾಲರು
3.	ಕರ್ನಾಟಕ ಧನವಿನಿಯೋಗ ವಿಧೇಯಕ 2002	30-03-2002	ರಾಜ್ಯಪಾಲರು
4.	ಕರ್ನಾಟಕ ಧನವಿನಿಯೋಗ (ಲೇಖನು ದಾನ) ವಿಧೇಯಕ, 2002	30-03-2002	ರಾಜ್ಯಪಾಲರು
5.	ಕರ್ನಾಟಕ ಸ್ಟಾಂಪ್ ಮತ್ತು ಕೆಲವು ಇತರೆ ಕಾನೂನು (ತಿದ್ದುಪಡಿ) ವಿಧೇಯಕ, 2002	30-03-2002	ರಾಜ್ಯಪಾಲರು

4) ವರದಿಗಳನ್ನೊಪ್ಪಿಸುವುದು

ಶ್ರೀ ಯು. ಆರ್. ಸಭಾಪತಿ (ಉಡುಪಿ) : ಮಾನ್ಯ ಅಧ್ಯಕ್ಷರೆ, ನಾನು ಕೃಷಿ ತೋಟಗಾರಿಕೆ, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖಾ ವಿಷಯ ಸಮಿತಿಯ 2002-03 ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ): ಮಾನ್ಯ ಅಧ್ಯಕ್ಷರೆ, ನಾನು ಇಂಧನ ಇಲಾಖಾ ವಿಷಯ ಸಮಿತಿಯ 2002-03ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಶ್ರೀ ಬಿ. ಸೋಮಶೇಖರ್ (ಮಳವಳ್ಳಿ): ಮಾನ್ಯ ಅಧ್ಯಕ್ಷರೆ, ನಾನು ಹಣಕಾಸು, ಸಾಂಖ್ಯಿಕ ಹಣಕಾಸು, ಸಾಂಖ್ಯಿಕ ಮತ್ತು ಯೋಜನೆ, ವಿಜ್ಞಾನ ಮತ್ತು ತಂತ್ರಜ್ಞಾನ ಅಭಿವೃದ್ಧಿ ಇಲಾಖಾ ವಿಷಯ ಸಮಿತಿಯ 2002-03ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಶ್ರೀ ಡಿ.ಸಿ. ತಮ್ಮಣ್ಣ (ಕಿರುಗಾವಲು): ಮಾನ್ಯ ಅಧ್ಯಕ್ಷರೆ, ನಾನು ವಸತಿ ಮತ್ತು ನಗರಾಭಿವೃದ್ಧಿ ಇಲಾಖಾ ವಿಷಯ ಸಮಿತಿಯ 2002-03ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.